(Sri KADIDAL MANJAPPA.)

(Minister for Law and Education)].—Sir, I beg to introduce :

The Mysore Legislature (Prevention of Disqualification) (Amendment) Bill, 1954 ;

The Mysore Legislature (Salaries) (Amendment) Bill, 1954, and

The Mysore University (Amendment) Bill, 1954,

which have been published in the *Mysore Gazette* (Extraordinary) dated 1st March 1954.

Sri T. CHANNIAH (Minister for Public Health and Local Self-Government).—Sir, I beg to introduce :

The City of Bangalore Improvement (Amendment) Bill, 1954, which was published in the *Mysore Gazette* (Extraordinary) dated 1st March 1954, under rule 48 of the Rules of Procedure and Conduct of Business in the Mysore Legislative Assembly.

Report of the Committee on Petitions. (Laid on the Table.)

Sri R. CHENNIGARAMIAH (Chairman of the Committee on Petitions).—Sir, I beg to lay the report of the Committee on Petitions on the Table of the House for the consideration of the House.

Mr. SPEAKER.—I think copies are distributed.

INTRODUCTION OF BILLS.

Sri T. CHANNIAH (Minister for Public Health and Local Self-Government).—Sir, I beg to introduce :

The City of Mysore Improvement (Amendment) Bill, 1954, which was published in the *Mysore Gazette* (Extraordinary) on 1st March 1954, under rule 48 of the Rules of Procedure and Conduct of Business in the Mysore Legislative Assembly.

MYSORE (PERSONAL AND MISCELLANEOUS) INAMS ABOLITION BILL.

Motion to consider (Continued).

Mr. SPEAKER.—Now we will take up for consideration the Mysore (Personal and Miscellaneous) Inams Abolition Bill.

ಶ್ರೀ ಜಿ. ಪಾಪಣ್ಣ (ಶಿಡ್ಲಘಟ್ಟ-ಚಿಕ್ಕಬಳ್ಳಾಪುರ).—ಸ್ವಾಮಿ, ಈ ಸಭೆಯು ಮುಂದಿರುವ ಇನಾಂ ಅಬಾಲಿಷ್ಡ್ ಮನೂದೆಯಲ್ಲಿ ಸೆಲೆಕ್ಟ್ ಸಮಿತಿಯವರು ಕೆಲವು ಮೂಲಭೂತವಾದ ಬದಲಾವಣೆಗಳನ್ನು ಮಾಡಿದ್ದಾರೆ. ಒಂದನೆಯದು : ಮುಂಚೆ ಗುಂಡಪ್ಪಗೌಡರ ಸಮಿತಿಯಲ್ಲಿ ತೀರ್ಮಾನವಾದ ಪ್ರಕಾರ ಖಿದ್ಮೀ ಟೆನೆಂಟ್, ಪರ್ಮನೆಂಟ್ ಟೆನೆಂಟ್, ಕ್ವಾಸಿ ಪರ್ಮನೆಂಟ್ ಟೆನೆಂಟ್ ಇವರ ಅನುಭವದಲ್ಲಿದ್ದ ಜಮೀನನ್ನು ಅವರ ಹೆಸರಿಗೆ ರಿಜಿಸ್ಟರು ಮಾಡಿ ಜೋಡಿದಾರರು ಸ್ವತಃ ವ್ಯವಸಾಯಮಾಡುತ್ತಿದ್ದ ಜಮೀನುಗಳನ್ನು ಮಟ್ಟಿಗೆ ಆ ಜೋಡಿದಾರರ ಹೆಸರಿನಲ್ಲಿ ರಿಜಿಸ್ಟರು ಮಾಡಬೇಕಾಗಿತ್ತು. ಈ ಸೆಲೆಕ್ಟ್ ಸಮಿತಿಯವರು ಈಗ ಅದನ್ನು ಬದಲಾಯಿಸಿ ಕ್ವಾಸಿ ಪರ್ಮನೆಂಟ್‌ಗೆ ಸಂಬಂಧಿಸಿದ ಡೆಫಿನಿಷ್ಡ್ ತೆಗೆದು ಅವರನ್ನು ಪರ್ಮನೆಂಟ್ ಟೆನೆಂಟ್ಸ್ ಡೆಫಿನಿಷ್ಡ್‌ನಲ್ಲಿ ಸೇರಿಸಿ ಖಿದ್ಮೀ ಟೆನೆಂಟ್ಸ್ ಮತ್ತು ಪರ್ಮನೆಂಟ್ ಟೆನೆಂಟ್ಸ್‌ಗೆ ಅವರ ಹೆಸರಿನಲ್ಲಿ ಅವರ ಅನುಭವದಲ್ಲಿರುವ ಜಮೀನನ್ನು ರಿಜಿಸ್ಟರು ಮಾಡಿ ಕಮ್ಯೂನಲ್ ಲ್ಯಾಂಡ್ಸ್, ಗೋಮಾಳ ಲ್ಯಾಂಡ್ಸ್, ಫಾರೆಸ್ಟ್ ಲ್ಯಾಂಡ್ಸ್ ಮುಂತಾದುವು ಜಾತಾ ಉಳಿದಿರುವುದನ್ನು ಜೋಡಿದಾರರ ಹೆಸರಿಗೆ ರಿಜಿಸ್ಟರು ಮಾಡುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ಇದರಿಂದ 12 ವರ್ಷಕ್ಕೆ ಡಮೆಯಾಗಿ ಸಾಗುವಳಿ ಮಾಡುತ್ತಿದ್ದ ರೈತರಿಗೆ ತೊಂದರೆಯಾಗುತ್ತದೆ. ಇದೂ ಅಲ್ಲದೆ 12 ವರ್ಷಕ್ಕೆಮೇಲ್ಪಟ್ಟು 40-50 ವರ್ಷಗಳಿಂದ ಸಾಗುವಳಿ ಮಾಡಿದ್ದರೂ ಅದನ್ನು ಆ ರೈತರು ತಾವು ಅಷ್ಟು ದಿವಸಗಳಿಂದ ಸಾಗುವಳಿ ಮಾಡುತ್ತಿದ್ದೇವೆಂಬುದನ್ನು ರುಜುವಾತು ಮಾಡುವುದು ಒಹಳ ಕಷ್ಟದ ವಿಷಯ. ಗುಂಡಪ್ಪಗೌಡರ ಸಮಿತಿಯವರು ಈ ವಿಷಯವನ್ನು ದೀರ್ಘವಾಗಿ ಚರ್ಚಿಸಿ ಜೋಡಿದಾರರು ಸ್ವಂತವಾಗಿ ಸಾಗುವಳಿ ಮಾಡುವುದನ್ನು ಮಟ್ಟಿಗೆ ಅವರ ಹೆಸರಿನಲ್ಲಿ ರಿಜಿಸ್ಟರು ಮಾಡಬೇಕೆಂದು ತೀರ್ಮಾನಿಸಿದ್ದಾರೆ. ಅದಕ್ಕೆ ಆ ಸಮಿತಿಯ ವರದಿಯಲ್ಲಿ ಕಾರಣಗಳನ್ನು ಕೂಡ ಕೊಟ್ಟಿದ್ದಾರೆ. ಮೈಸೂರು ಸಂಸ್ಥಾನದ ಜೋಡಿ ಗ್ರಾಮಗಳಲ್ಲಿರುವ ರೈತರ ಸ್ಥಿತಿಗೂ ನೆರೆ ಸಂಸ್ಥಾನಗಳಲ್ಲಿರುವ ಜಮೀರ್ದಾರಿ ಪದ್ಧತಿಗೊಳಪಟ್ಟ ರೈತರ ಸ್ಥಿತಿಗೂ ಬಹಳ ವ್ಯತ್ಯಾಸವಿದೆಯೆಂದು ಅವರು ಸೂಚಿಸಿದ್ದಾರೆ. ಬೇರೆ ಸಂಸ್ಥಾನಗಳಲ್ಲಿ ಜಮೀನುದಾರ ಮತ್ತು ಷಿಕ್ಮಿದಾರರ ಸಂಬಂಧವನ್ನು ಬಹಳ ಕಿಂಪೆಯೇ ಕಾನೂನು ಮೂಲಕ ನಿರ್ದಿಷ್ಟಪಾಗಿರುವಂತೆ ಏರ್ಪಾಡುಮಾಡಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಜೋಡಿ ಗ್ರಾಮಗಳ ವಿಚಾರವಾಗಿ ಅಂಥ ಒಂದು ನಿರ್ದಿಷ್ಟ ವ್ಯವಸ್ಥೆ ಮಾಡಿಲ್ಲ. ಈ ಒಂದು ಸರ್ಕಾರದ ಲೋಪದಿಂದ ಅಲ್ಲಿರುವ ರೈತರಿಗೆ ಈ ದಿವಸ ತಮ್ಮ ಹಕ್ಕನ್ನು ಸ್ಥಾಪಿಸುವುದಕ್ಕೆ ಯಾವ ಅನುಕೂಲವೂ ಇಲ್ಲವಾಗಿದೆ. ಇದಕ್ಕೆ ಲ್ಯಾಂಡ್ ರಿಫಾರ್ಂ ಸಮಿತಿಯ ವರದಿಯಲ್ಲಿ ಕೂಡ ಉದಾಹರಣೆ ಕೊಟ್ಟಿದ್ದಾರೆ. ಮದ್ರಾಸಿನಲ್ಲೂ ಇಂಥ ಕಾನೂನಿದೆ ; ಅಲ್ಲಿ ರೈತರಿಗೆ ಹೇಗೆ ಅನುಕೂಲ ಪಡಿಸಿದ್ದಾರೆಂದರೆ ಜಮೀನುದಾರರು ತಮ್ಮ ಸ್ವಂತ ಜಮೀನೆಂದು ಹೇಳುವುದಕ್ಕೆ ಅವರು 12 ವರ್ಷ ಸ್ವಂತ ಸಾಗುವಳಿ ಮಾಡಿರಬೇಕು, ಹಾಗೆ ಮಾಡಿದ್ದರೆ ಮಾತ್ರ ಅವರಿಗೆ ಜಮೀನಿನ ಹಕ್ಕು ಬರುತ್ತದೆ ಎಂದು ಅಲ್ಲಿ ಹೇಳಿದ್ದಾರೆ. ಆದರೆ ನಮ್ಮ ಸಂಸ್ಥಾನದಲ್ಲಿ ಜೋಡಿ ಗ್ರಾಮಗಳಿಗೆ ಅನ್ವಯವಾಗುವಂತಹ ಒಂದು ನಿರ್ದಿಷ್ಟವಾದ ಕಾನೂನಿಲ್ಲದಿರುವ ಕಾರಣದಿಂದ ಜೋಡಿದಾರರು ಜೋಡಿ ಗ್ರಾಮಗಳಲ್ಲಿ ಸರ್ವಾಧಿಕಾರಿ